


ಗ್ರಾಂಟ್ ಚರ್ಚ್ ಅವಶೇಷಗಳನ್ನು ಸಂರಕ್ಷಿಸಿರುವ ಬಗೆ





ಬಾನಿನೊಂದಿಗೆ ಪಿಸುನುಡಿಗಳನಾಡುತ್ತಿರುವಂತೆ ಕಾಣಿಸುವ ಸೋಫಿಯಾ ನಗರದ ಮಸೀದಿ

## ಮರುಹುಟ್ಟು ಪಡೆದ ದೇಶ

ಎಲ್ಲರಿಗೂ ಬೇಕಾದ, ಎಲ್ಲರಿಂದಲೂ ಪತನವಾದ, ಇತರರಿಂದ ಮರುಹುಟ್ಟು ಪಡೆದ, ಬೇಕಾದಂತೆ ನಾಮಕರಣಗೊಂಡ ಈ ಊರಿನ ಕಣಕಣದಲ್ಲೂ ಚರಿತ್ರೆಯ ಪಿಸುನುಡಿಗಳಿವೆ.

ಆದಿಮಾನವರ ತಂಗುದಾಣವಾಗಿದ್ದ (ಸುಮಾರು 6000–5000 ಬಿಸಿಇ) ಈ ಊರಿಗೆ, ಅಲೆಮಾರಿಗಳಾಗಿ ಸುತ್ತುತ್ತಿದ್ದ ಮನುಷ್ಯರನ್ನು ಹಿಡಿದು ನಿಲ್ಲಿಸಿ ನೆಲೆಯೂರಲು ಬೇಕಾದ ಎಲ್ಲ ಆಕರ್ಷಣೆಗಳು ಇದ್ದವು ಎನ್ನುವುದು ಮಹತ್ತರ ವಿಚಾರ.

ಅಂದಾಜಿನ ಪ್ರಕಾರ, 8 ದಶಲಕ್ಷ ವರ್ಷಗಳ ಚರಿತ್ರೆ ಈ ಸ್ಥಳದೊಂದಿಗೆ ಮಿಳಿತಗೊಂಡಿದೆ. ಇದು ಬಲ್ಗೇರಿಯಾದ ಎರಡನೇ ದೊಡ್ಡ ನಗರ. 1874ರಿಂದಲೇ ಇಲ್ಲಿ ಒಟ್ಟೊಮಾನ್ ಸಾಮ್ರಾಜ್ಯದವರೆಗೆ ಹೋಗಲು ಬೇಕಿದ್ದ ರೈಲ್ವೆ ಸಂಪರ್ಕ ಸೃಷ್ಟಿಯಾಗಿದೆ. 1927ರಿಂದ ವಿದ್ಯುತ್ತಿನ ವ್ಯವಸ್ಥೆ ಶುರುವಾಗಿದೆ. 1943ರಲ್ಲಿ ಈ ನಗರ 1,500 ಯಹೂದಿಗಳನ್ನು ಜರ್ಮನಿಯ ಕ್ರೌರ್ಯದಿಂದ ರಕ್ಷಿಸಿದೆ. 1944ರಲ್ಲಿ ಈ ನಗರದ ಮೇಲೆ ಅಮೆರಿಕದ ಒಕ್ಕೂಟ ರಾಷ್ಟ್ರಗಳ ಬಾಂಬಿನ ದಾಳಿ ನಡೆದು, ಅದು ಮತ್ತೆ ಬೆಳೆದ ನಗರವಾಗಿದೆ.

ಈ ಊರಿನ ತುಂಬಾ ಎಲ್ಲೆಲ್ಲಿಯೂ ರೋಮನ್ನರ ಸ್ಮಾರಕಗಳ ಅವಶೇಷಗಳಿವೆ. ರೋಮನ್ನರ ಬಯಲು ರಂಗಮಂದಿರ ಆಕರ್ಷಕವಾಗಿದ್ದು, ಸುಸ್ಥಿತಿಯಲ್ಲಿದೆ. ಒಂದೇ ಬಾರಿ ಸುಮಾರು 7,000 ಜನರು ಕೂರಲು ವ್ಯವಸ್ಥೆಯಿದೆ. 1968–1984ರ ನಡುವೆ ಇದನ್ನು ಮತ್ತೆ ಉತ್ತಮ ಸ್ಥಿತಿಗೆ ತರಲಾಗಿದ್ದು, ವರ್ಷದಲ್ಲಿ ಹಲವಾರು ಕಾರ್ಯಕ್ರಮಗಳನ್ನು ನಡೆಸಲಾಗುತ್ತದೆ.

## ದೇಶದ ಅಸ್ಮಿತೆ 'ಓಲ್ಡ್ ಟೌನ್'

ಬಲ್ಗೇರಿಯಾದಲ್ಲಿ ಹಲವಾರು ಮ್ಯೂಸಿಯಂಗಳಿವೆ. ಇವುಗಳಲ್ಲಿ ಬಹು ಆಕರ್ಷಕವಾದುದು 'ಓಲ್ಡ್ ಟೌನ್' (ಹಳೆಯ ಊರು). ಇದು ಬಲ್ಗೇರಿಯಾದ ಅಸ್ಮಿತೆ. ಬಲ್ಗೇರಿಯಾದ ರಿನ್ನೈಸನ್ಸ್ ವಾಸ್ತುಶಿಲ್ಪದ ವಿನ್ಯಾಸವಿರುವ ಬಣ್ಣಬಣ್ಣದ ಮನೆಗಳು, ಕಲ್ಲು ಹಾಸಿನ ರಸ್ತೆಗಳನ್ನು ಇಲ್ಲಿ ಹಾಗೆಯೇ ಉಳಿಸಿಕೊಳ್ಳಲಾಗಿದೆ. ಒಂದು ಮನೆಯಿದ್ದಂತೆ ಇನ್ನೊಂದಿಲ್ಲ. ಪ್ರತಿಮನೆಯೂ ಕಣ್ಣಿಗೆ ಹಬ್ಬ.

ಇಲ್ಲಿನ ರಿಲಾ ಮೊನಾಸ್ಟೆರಿ, ಪೂರ್ವ ಯೂರೋಪಿನ ಅತಿ ದೊಡ್ಡ ಮತ್ತು ಅತ್ಯಂತ ಪ್ರಸಿದ್ಧ ಸಾಂಪ್ರದಾಯಿಕ ಕ್ರೈಸ್ತ ಮಠ. ಅತ್ಯಂತ ಪುರಾತನವೂ, ಸಾಂಸ್ಕೃತಿಕವಾಗಿ ಅತ್ಯಂತ ಮುಖ್ಯ ಮಠವೂ ಆದ ಕಾರಣ ಯುನೆಸ್ಕೋ ಇದನ್ನು 1983ರಲ್ಲಿ ಸಂರಕ್ಷಿತ ಜಾಗವೆಂದು ಘೋಷಿಸಿದೆ. ಒಟ್ಟೊಮಾನರು ಬಲ್ಗೇರಿಯಾ ದೇಶವನ್ನು ಆಳಲು ಶುರುಮಾಡಿದಾಗ ಈ ಸ್ಥಳ ಬಲ್ಗೇರಿಯಾದ ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿಗಳನ್ನು ಉಳಿಸಿದ ಸ್ಥಳ ಎನ್ನುವ ಕಾರಣಕ್ಕೆ ಚರಿತ್ರೆಯಲ್ಲಿ ಸ್ಥಾನ ಪಡೆದಿದೆ.

ನೆಸ್ಸೆಬಾರ್ ಬಲ್ಗೇರಿಯಾದ ಕಪ್ಪು ಕಡಲ ಕಿನಾರೆ ಮೇಲಿರುವ ಮತ್ತೊಂದು ಚಾರಿತ್ರಿಕ ನಗರ. 3ನೇ ಶತಮಾನದಿಂದಲೂ ಇಲ್ಲಿ ಹಲವಾರು ಸಂಸ್ಕೃತಿಗಳು ಬೇರುಬಿಟ್ಟಿದ್ದ ಪ್ರತೀತಿಗಳಿವೆ. ಈ ಜಾಗಕ್ಕೆ ಇರುವ ಚರಿತ್ರೆ ಮತ್ತು ಸಾಂಸ್ಕೃತಿಕ ಶ್ರೀಮಂತಿಕೆ ಗುರುತಿಸಿ, 1983ರಲ್ಲಿ ಯುನೆಸ್ಕೊ ಇದನ್ನು ಪ್ರಪಂಚದ ಒಂದು ಮುಖ್ಯ ಪಾರಂಪಾರಿಕ ನಗರವೆಂದು ಘೋಷಿಸಿದೆ.

ಉತ್ತರ ಭಾಗದ ಬಲ್ಗೇರಿಯಾದಲ್ಲಿರುವ 'ಸರವೆಟ್ಸ್' ಕೋಟೆ ಕೂಡ ಆಕರ್ಷಕವಾಗಿದೆ. 1185ರಿಂದ 1393ರವರೆಗೆ ಬಲ್ಗೇರಿಯಾ ಆಳಿದ ರಾಜ–ರಾಣಿಯರಿಗೆ ಈ ಕೋಟೆ ರಕ್ಷಣೆ ಒದಗಿಸಿದೆ. ಇದರೊಂದಿಗೆ, ಕಣ್ಸೆಳೆಯುವ ಮತ್ತೊಂದು ನಗರ ವಾರ್ನ. ಬಲ್ಗೇರಿಯಾದ ಮತ್ತೊಂದು ಸಮುದ್ರ ಕಿನಾರೆಯ ನಗರವಿದು.

ಚರಿತ್ರೆಯ ತಾಣಗಳೊಂದಿಗೆ, 'ಪಿರಿನ್ ಅರಣ್ಯ' ಪ್ರದೇಶ ಬಲ್ಗೇರಿಯಾದ ಮತ್ತೊಂದು ಹಿರಿಮೆ. ಅದು ಅಲ್ಲಿನ ಪ್ರಕೃತಿಸೌಂದರ್ಯಕ್ಕೆ ಹಿಡಿದಿರುವ ಕನ್ನಡಿ. ಇಲ್ಲಿನ ಅತ್ಯಂತ ದೊಡ್ಡ ರಾಷ್ಟ್ರೋದ್ಯಾನವಿದು. ಪಿರಿನ್ ಬೆಟ್ಟಗಳಿಂದ ಆವೃತವಾದ ಈ ಪ್ರದೇಶ ಸಿಹಿನೀರಿನ ನದಿಗಳನ್ನು, ಹಿಮಾವೃತ ಶೃಂಗ ಶ್ರೇಣಿಗಳನ್ನು ಹೊಂದಿದೆ. ಇಲ್ಲಿ ಹಿಮದಿಂದ ಹುಟ್ಟಿ ಹರಿವ ನದಿಗಳು ಹಲವಾರು. ಪಿರಿನ್ ಪ್ರದೇಶದಲ್ಲಿಯೇ ಇಂತಹ 118 ರಮ್ಯವಾದ ಕೊಳಗಳಿವೆ.

ಏನೆಲ್ಲ ಹಿರಿಮೆಗಳ ನಡುವೆಯೂ ಬಲ್ಗೇರಿಯಾ ಒಂದು ಪುಟ್ಟ ದೇಶ ಎನ್ನುವುದು ಗಮನಾರ್ಹ. ಇತರೆ ಯೂರೋಪಿನ ನಗರಗಳಿಗೆ ಹೋಲಿಸಿದರೆ ಊಟೋಪಚಾರ ಮತ್ತು ಸಾರಿಗೆ ಇಲ್ಲಿ ಬಹಳ ಅಗ್ಗ. ಜನರು ಕೌಟುಂಬಿಕ ಮತ್ತು ಧಾರ್ಮಿಕ ಶ್ರದ್ಧೆಯಿರುವವರು.ಚಿಕ್ಕ ದೇಶವಾದರೂ ಇಲ್ಲಿನ ಉನ್ನತ ಶಿಕ್ಷಣ ಸೇರಿದಂತೆ ಎಲ್ಲವೂ ಬಲ್ಗೇರಿಯನ್ ಭಾಷೆಯಲ್ಲಿ ನಡೆಯುತ್ತವೆ.

ರಷ್ಯನ್ನರ ಹಳೆಯ ಉಪಕಾರ ಸ್ಮರಣೆ ಮಾಡುವ ಈ ಜನರು, ಉಕ್ರೇನ್ ಯುದ್ಧ ನಿರಾಶ್ರಿತರಿಗೂ ಆಶ್ರಯ ನೀಡಿದ್ದಾರೆ. ಅಕ್ಕಪಕ್ಕದ ದೇಶಗಳೊಂದಿಗೆ ಸಾಮರಸ್ಯ ಮತ್ತು ಮುತ್ಸದ್ದಿತನದ ಗೆಳೆತನ ತೋರುವ ಬಲ್ಗೇರಿಯಾ ಬಹುಚರಿತೆಯ ದೇಶ.

ಪ್ರತಿಕ್ರಿಯಿಸಿ: feedback@sudha.co.in